## ಬಣ್ಣ ಬಯಲಾದಾಗ

ಗುಂಡ ತನ್ನ ಮದುವೆಯ ನಂತರ ಅವನ ವಧುವಿಗೆ ಅಲಂಕಾರ ಮಾಡಿದ್ದ ಬ್ಯೂಟಿಷಿಯನ್ ಮನೆಗೆ ಹೋಗಿ ಒಂದು ಕವರ್ ಕೊಟ್ಟ. 'ಐ ಫೋನ್'ನ ಬಾಕ್ಸ್ ನೋಡಿ ಅವಳು ಸಂತೋಷದಿಂದ ಅದನ್ನು ತೆರೆದು ನೋಡಿದಳು. ಅದು ಸಾಧಾರಣ ಬೇಸಿಕ್ ಮಾಡೆಲ್ ಫೋನ್ ಆಗಿತ್ತು. ಆಕೆ ಕೋಪದಿಂದ, 'ಏನ್ಸಾರ್, ಹೀಗೆ ಮೋಸ ಮಾಡಿದ್ದೀರಾ?' ಎಂದು ಕೇಳಿದಳು. ಗುಂಡ, 'ಮೇಡಂ, ನನಗೂ ಸಹ ಹೀಗೆ ಆಯ್ತು, ನೀವು ಮಾಡಿದ ಮೇಕಪ್ ಕಳಚಿದ ನಂತರ!' ಎಂದ. ಆಕೆ ನಿರುತ್ತರಳಾದಳು.

**ಸಿ.ಆರ್. ಪುಷ್ಪ**





## ಬಾಲ್ಕನಿಯಲ್ಲಿ...

ಮರಿನಂಜ ಮೀನಾಕ್ಷಿ ಥಿಯೇಟರ್‌ನಲ್ಲಿ ಗೇಟ್‌ಕೀಪರ್. ಸಿನಿಮಾ ಶುರುವಾದ ಬಳಿಕ ಬ್ಯಾಟರಿ ಹಿಡಿದು ಪ್ರೇಕ್ಷಕರಿಗೆ ಸೀಟು ತೋರಿಸಿ ಕೂರಿಸುವ ಕೆಲಸ ಅವನದು.

ಒಂದು ದಿನ ಅವನಿಗೆ ವಿಪರೀತ ಹಲ್ಲು ನೋವು! ದಂತ ವೈದ್ಯರಿದ್ದಲ್ಲಿಗೆ ಹೋದವನು ಕುರ್ಚಿಯಲ್ಲಿ ಕೂತು ಬಾಯಿ ತೆರೆದ.

ಡಾಕ್ಟರು ಬ್ಯಾಟರಿ ಹಿಡಿದು ಕೇಳಿದರು, 'ಯಾವ ಹಲ್ಲು ನೋಯ್ತಾ ಇದೆಯಪ್ಪ?'

'ಅದೇ ಸಾರ್! ಬಾಲ್ಕನಿಯಲ್ಲಿ ಎಡಬದಿಯಿಂದ ನಾಲ್ಕನೆಯದು!' ಎಂದ!

**ಕೆ. ಶ್ರೀನಿವಾಸ ರಾವ್**